ದಿನಾಂಕಃ **05.03.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಎನ್.ಆರ್.ವಕೀಲರಿಂದಃ</u>

ನಾಗಮ್ಮ ಕೋಂ ಅಂಜಪ್ಪರವರನ್ನು ನಾನು ನೋಡಿರುತ್ತೇನೆ. ನಾಗಮ್ಮ ಕೋಂ ಅಂಜಪ್ಪರವರು ತೀರಿಕೊಂಡಿರುತ್ತಾರೆ. ನಾಗಮ್ಮ ಕೋಂ ಅಂಜಪ್ಪರವರ ಹೆಸರಿಗೆ ಒಂದು ಮನೆ ಮತ್ತು ನಿವೇಶನ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರಿರುವಂತಹ ವಾದಿಯನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ವಾದಿ ವಾಸವಾಗಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ವಾದಿ ದಿಃ27.08.2019 ರಂದು ನಾಗಮ್ಮ ಕ್ಮೊ ಅಂಜಪ್ಪರವರಿಂದ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ ಖಾತೆ ನಾಗಮ್ಮ ಕೋಂ ಅಂಜಪ್ಪರವರಿಗೆ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಕ್ರಯಪತ್ರದ ಆದಾರದ ಮೇರೆಗೆ ದಾವಾ ಸ್ವತ್ತಿನ ಖಾತೆ ವಾದಿ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

2. ಸರ್ವೆ.ನಂ.28/21 ರಲ್ಲಿನ 5 ಗುಂಟೆ ಜಮೀನಿನ ಖಾತೆ ಚಿಕ್ಕಹನುಮಯ್ಯ ಮತ್ತು ಲಕ್ಷ್ಮಯ್ಯನವರ ಹೆಸರಿನಲ್ಲಿ ಇರುತ್ತದೆ. ಸದರಿ ಸ್ವತ್ತು ಲಕ್ಷ್ಮಯ್ಯರವರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ಚಿಕ್ಕಹನುಮಯ್ಯ ಲಕ್ಷ್ಮಯ್ಯನಿಂದ ಖರೀದಿ ಮಾಡಿರುತ್ತಾರೆ. ಸರ್ವೆ.ನಂ.28/21 ಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. 2024-25 ನೇ ಸಾಲಿನಲ್ಲಿ ಸರ್ವೆ.ನಂ.28/21 ರ ಖಾತೆ ಚಿಕ್ಕಹನುಮಪ್ಪನವರ ಹೆಸರಿನಲ್ಲಿ ಇತ್ತು.

ಸರ್ವೆ.ನಂ.28/21 ರ ಖಾತೆ ಲಕ್ಷ್ಮಯ್ಯ ಮತ್ತು ಚಿಕ್ಕಹನುಮಪ್ಪರವರ ಹೆಸರಿನಲ್ಲಿ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಚಿಕ್ಕಹನುಮಯ್ಯನ ತಾತನ ಹೆಸರಿನಲ್ಲಿ ಇತ್ತು ಎಂದು ಉತ್ತರಿಸುತ್ತಾರೆ.

3. ಲಕ್ಷ್ಮಯ್ಯ ಚಿಕ್ಕಹನುಮಪ್ಪರವರ ಹೆಸರಿಗೆ ಆಸ್ತಿ ಮಾರಾಟ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಲಕ್ಷ್ಮಯ್ಯ ಯಾವ ದಿನಾಂಕದಂದು ಮಾರಾಟ ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಇಂದಿಗೂ ಖಾತೆ ಚಿಕ್ಕಹನುಮಪ್ಪನ ಹೆಸರಿನಲ್ಲಿ ಇರುತ್ತದೆ. ದಾವಾ ಸ್ವತ್ತಿನಲ್ಲಿ ಸುಮಾರು 40-45 ವರ್ಷಗಳಿಂದ ಪ್ರತಿವಾದಿಗಳು ಮನೆಕಟ್ಟಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮನೆಯ ಖಾತೆ ನಂಬರ್ ನನಗೆ ಗೊತ್ತಿರುವುದಿಲ್ಲ.

4. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗಳು ನಮ್ಮ ಸಂಬಂಧಿಕರು ಎಂದು ಸೂಚಿಸುವುದು ಸರಿಯಲ್ಲ. ನನಗೆ ವಾದಿ ಮತ್ತು ವಾದಿಯ ತಾಯಿಯ ವಿರುದ್ಧ ಮೊದಲಿನಿಂದಲೂ ದ್ವೇಷ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ವಾದಿಯ ದೊಡ್ಡಮ್ಮ ನಾಗಮ್ಮನವರ ವಿರುದ್ಧ ನನಗೆ ಮೊದಲಿನಿಂದಲೂ ದ್ವೇಷ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ನಾಗಮ್ಮನವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ನಾಗಮ್ಮ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನಾಗಮ್ಮ ನಮಗೆ ಮನೆ ಕೊಡಲಿಲ್ಲ ಎಂಬ ಕಾರಣಕ್ಕಾಗಿ ವಾದಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

5. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ವಾದಿ ಕ್ರಯಪತ್ರ ಬರೆಸಿಕೊಂಡ ನಂತರ ನಮಗೆ ಮತ್ತು ವಾದಿಗೆ ಜಗಳ ಆಗಿರುತ್ತದೆ, ಅದರ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರ ಸಲ್ಲಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. 2 ರಿಂದ 5 ನೇ ಪ್ರತಿವಾದಿಗಳ ತಂದೆ ಸುಮಾರು 40-45 ವರ್ಷಗಳ ಹಿಂದೆ ಮನೆಕಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

6. ಸರ್ವೆ.ನಂ.28 ರಲ್ಲಿ ನನಗೆ 3 ಗುಂಟೆ ಜಮೀನು ಇರುತ್ತದೆ. ಸದರಿ ಸ್ವತ್ತಿನ ಖಾತೆ ನನ್ನ ದೊಡ್ಡಪ್ಪ ರಾಮಕೃಷ್ಣಪ್ಪರವರ ಹೆಸರಿನಲ್ಲಿ ಇರುತ್ತದೆ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ನನಗೆ ಜಮೀನು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ